ದಿನಾಂಕಃ 11-07-2023 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಹೆಚ್.ಟಿ.ಎಸ್.ಕೆ. ವಕೀಲರಿಂದಃ ಆರೋಪಿಯ ಪರವಾಗಿಃ

7. ಫ್ರಾಸಾ-1 ರವರು ನನಗೆ ಈಗ್ಗೆ 7 ವರ್ಷಗಳಿಂದ ಪರಿಚಯ. ಫ್ರಾಸಾ-1 ರವರು ಟಿ.ಎಂ.ಎಸ್ ಕಾಲೇಜಿನಲ್ಲಿ

ವ್ಯಾಸಂಗ ಮಾಡುತ್ತಿದ್ದರು. ನಾನು ಸಹ ಪದವಿಯನ್ನು ಟಿ.ಎಂ.ಎಸ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿದ್ದೇನೆ. ನಾನು ಪ್ರಥಮ ವರ್ಷದ ಡಿಗ್ರಿ ಓದುತ್ತಿರಬೇಕಾದರೆ ಕೋಟೆಯಲ್ಲಿರುವ ಒಂದು ಪಿ.ಜಿಯಲ್ಲಿ ಇದ್ದೆನು ಆದರೆ ಅಲ್ಲಿ ನನಗೆ ಸರಿ ಬರದ ಕಾರಣ ಎರಡನೇ ವರ್ಷದಿಂದ ನನ್ನ ಸಂಬಂಧಿಕರಾದ ಪ್ರಾಸಾ-9 ಮಮತರವರ ಮನೆಯಲ್ಲಿ ಉಳಿದುಕೊಂಡಿದ್ದೆನು. ಆ ರೀತಿ ನೀವು ಮೊದಲಿಗೆ ಕೊಟೆಯ ಪಿ.ಜಿಯಲ್ಲಿ ಉಳಿದುಕೊಂಡು ನಂತರ ಪ್ರಾಸಾ-9 ರವರ ಮನೆಗೆ ಹೋಗಿದ್ದಾಗಿ ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ತಿಳಿಸಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ಪ್ರಾಸಾ-9 ರವರ ಗಂಡನ ಹೆಸರು ಕೃಷ್ಣೇಗೌಡ, ಅವರ ತಾಯಿ ಹೆಸರು ಅರುಣಾಕ್ಷಿ ಮತ್ತು ತಂದೆಯ ಹೆಸರು ಪುಟ್ಟಸ್ವಾಮಿಗೌಡ. ಅವರು ಒಕ್ಕಲಿಗ ಜನಾಂಗಕ್ಕೆ ಸೇರಿದವರು. ನೀವು ಪೊಲೀಸರಿಗೆ ಹೇಳಿಕೆ ನೀಡಿದ್ದೀರಾ ಎಂದರೆ ಹೌದು ಎನ್ನುತ್ತಾರೆ. ನಾನು ಅಪರೂಪಕ್ಕೆ ಪ್ರಾಸಾ-11 ರವರ ಮನೆಗೆ ಹೋಗಿ ಬರುತ್ತಿದ್ದೆನು. ನನಗೆ ಆರೋಪಿಯ ಪರಿಚಯ ಇತ್ತು. ಆರೋಪಿ ಮನೆಯಲ್ಲಿಯೇ ಇರುತ್ತಿದ್ದನು. ಮೃತ ಸುಧಾರವರು ದಿನಸಿ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದರು. ಆ ಸಮಯದಲ್ಲಿ ಆರೋಪಿ ಮನೆಯಲ್ಲಿಯೇ ಇರುತ್ತಿದ್ದನು. ಆಗ ಸುಧಾ ರವರು ಆರೋಪಿಯನ್ನು ಒಬ್ಬನನ್ನೇ ಮನೆಯಲ್ಲಿ ಇರಿಸಿ ಮನೆಯ ಬೀಗವನ್ನು ಹಾಕಿಕೊಂಡು ಹೋಗುತ್ತಿದ್ದರು ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆರೋಪಿ

ಎಲ್ಲಿಯೂ ಕೆಲಸಕ್ಕೆ ಹೋಗುವುದಿಲ್ಲ, ಕಲಸಕ್ಕೆ ಸೇರಿಸಿದರೆ ಎರಡು ದಿನ ಗಳಲ್ಲಿಯೇ ಕೆಲಸವನ್ನು ಬಿಡುವುದಾಗಿ ಮತ್ತು ಆತ ಮನೆಯಲ್ಲಿಯೇ ಇರುವುದಾಗಿ ಫ್ರಾಸಾ-1 ರವರು ಹೇಳುತ್ತಿದ್ದರು. ಆರೋಪಿ ಯಾವ ಕಾರಣಕ್ಕೆ ಕೆಲಸಗಳನ್ನು ಬಿಟ್ಟು ಬರುತ್ತಿದ್ದನು ಎಂದು ನೀವು ಫ್ರಾಸಾ-1 ರವರನ್ನು ವಿಚಾರಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸುಧಾರವರು ಆರೊೀಯನ್ನು ಆಗಾಗ್ಗೆ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದ ವಿಚಾರ ನಿಮಗೆ ತಿಳಿದಿದೆಯೇ ಎಂದರೆ ಸಾಕ್ಷಿ ಆರೋಗ್ಯ ಸರಿಇಲ್ಲದಾಗ ಕರೆದುಕೊಂಡು ಹೋಗುತ್ತಿದ್ದಾಗಿ ತಿಳಿದಿದೆ ಎನ್ನುತ್ತಾರೆ. ಸುಧಾರವನ್ನು ನಾನು ಮಾತನಾಡಿಸಿದ್ದೇನೆ. ಆ ಸಮಯದಲ್ಲಿ ಆರೋಪಿಗೆ ಇರುವ ಆರೋಗ್ಯ ಸಮಸ್ಯೆ ಏನು ಎಂದು ನೀವು ಅವರನ್ನು ವಿಚಾರಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನೀವು ಆರೋಪಿಯನ್ನು ಮನೆಯ ಹೊರಗೆ ಯಾವತ್ತಾದರು ನೋಡಿದ್ದೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಆರೋಪಿ ಹೊರಗಡೆ ಹೋಗಬೇಕಾದರೆ ಅವರ ಅಮ್ಮನ ಜೊತೆಯಲ್ಲಿಯೇ ಹೋಗುತ್ತಿದ್ದನು ಆತ ಒಬ್ಬನೇ ಹೊರಗಡೆ ಹೋತ್ತಿರಲಿಲ್ಲ ಎಂದರೆ ಸರಿ. ಆರೋಪಿ ಮಾನಸಿಕ ಅಸ್ವಸ್ತ ನಾಗಿದ್ದ ಕಾರಣ ಸುಧಾರವರು ಆತನನ್ನು ಆಗಾಗ್ಗೆ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದರು ಎಂದರೆ ಸರಿಯಲ್ಲ. ಫ್ರಾಸಾ-1 ರವರು ನಿಮ್ಮ ಆತ್ಮೀಯ ಸ್ನೇಹಿತ ಎಂದರೆ ಸರಿ. ಇಂದಾವರ

ಗ್ರಾಮದಲ್ಲಿ ಫ್ರಾಸಾ-1 ರವರಿಗೆ ಸೇರಿದ ಜಮೀನು ಮತ್ತು ಮನೆ ಇದೆ ಎಂದರೆ ಸರಿ.

8. ದಿನಾಂಕಃ 23.09.2021 ರಂದು ನಾನು ನಮ್ಮ ಮನೆಯಿಂದ ಹೊರಟಾಗ ಬೆಳಗ್ಗೆ 11.00 ಗಂಟೆಯಾಗಿತ್ತು.ನಾನು ನಮ್ಮ ಮನೆಯಿಂದ ಹೊರಟು ಕ್ಯಾಂಟೀನ್ ನ ಹತ್ತಿರ ಹೋಗಿ ಸುಮಾರು 15 ನಿಮಿಷಗಳ ಕಾಲ ಸ್ನೇಹಿತರ ಜೊತೆ ಮಾತನಾಡಿಕೊಂಡು ನಂತರ ಫ್ರಾಸಾ-1 ರವರ ಹತ್ತಿರ ಹೋದೆನು. ಆ ದಿನ ನಾನು ಫ್ರಾಸಾ-1 ರವರ ಮನೆಗೆ ಬೆಳಗ್ಗೆ ಹೋಗಿದ್ದಾಗ ಅಲ್ಲಿ ಆರೋಪಿ , ಫ್ರಾಸಾ-1 ಮತ್ತು ಅವರ ಅವರ ತಾಯಿ ಸುಧಾರವನ್ನು ನೋಡಿದ್ದೇನೆ. ಆಗ ಸಮಯ ಬೆಳಗ್ಗೆ 11.25 ಗಂಟೆ ಆಗಿತ್ತು. ಆಗ ನಿಮಗೆ ಫ್ರಾಸಾ-1, ಆರೋಪಿ ಮತ್ತು ಸುಧಾರವರು ದೇವಸ್ಥಾನಕ್ಕೆ ಹೋಗಿ ಬಂದಿದ್ದ ಬಗ್ಗೆ ಮಾಹಿತಿ ತಿಳಿಯಿತೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಆ ಸಮಯದಲ್ಲಿ ನೀವು ಫ್ರಾಸಾ-1 ರವರ ಮನೆಯ ಒಳಗೆ ಹೋಗಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಆಗ ಮನೆಯ ಒಳಗೆ ನಾನು 5 ನಿಮಿಷ ಇದ್ದೆನು. ನಂತರ ನಾನು ಮತ್ತು ಫ್ರಾಸಾ-1 ರವರು ಫ್ರಾಸಾ-9 ಮಮತರವರ ಮನೆಗೆ ಹೋದೆವು. ನಾನು ಫ್ರಾಸಾ-1 ರವರ ಮನೆಗೆ ಹೋಗುತ್ತಿದ್ದ ಸಮಯದಲ್ಲಿಯೇ ಬೆಳಗ್ಗೆ 11.20 ಗಂಟೆ ಸುಮಾರಿಗೆ ಫ್ರಾಸಾ-9 ರವರು ನನಗೆ ಫೋನ್ ಮಾಡಿ ನನಗೆ ಹುಷಾರಿಲ್ಲ ನನಗೆ ಆಸ್ಪತ್ರೆಗೆ ಕರೆದುಕೊಂಡು ಬಾ ಎಂದು ಕರೆದರು. ಆ ಸಮಯದಲ್ಲಿ ಫ್ರಾಸಾ-1 ರವರ ಮನೆಯ ಹತ್ತಿರ

ಹೋಗುತ್ತಿದ್ದ ಕಾರಣಕ್ಕೆ ನಾನು ದಾರಿ ಮಧ್ಯದಲ್ಲಿಯೇ ಫ್ರಾಸಾ-1 ರವರಿಗೆ ಫೋನ್ ಮಾಡಿ ನನ್ನ ಜೊತೆ ಬರುತ್ತೀಯ ಎಂದು ಕೇಳಿದ್ದೇನೆ. ಆ ದಿನ ಯಾವ ವಾರವಾಗಿತ್ತು ಎಂದು ನನಗೆ ನೆನಪಿಲ್ಲ. ಆ ಸಮಯದಲ್ಲಿ ಫ್ರಾಸಾ-1 ರವರು ವಿದ್ಯಾಭ್ಯಾಸಾ ಮಾಡುತ್ತಿದ್ದರೆ ಎಂದರೆ ಸಾಕ್ಷಿ ಇಲ್ಲ ಆತ ಕೆಲಸಕ್ಕೆ ಹೋಗುತ್ತಿದ್ದರು ಎನ್ನುತ್ತಾರೆ. ಆ ಸಮಯದಲ್ಲಿ ನಾನು ಅಂಗಡಿ ತೆರೆಯಲು ಅಂಗಡಿಯನ್ನು ಹುಡುಕುತ್ತಿದ್ದೆನು.

9. ಮಮತ ರವರ ಮನೆಗೆ ನೀವು ಮತ್ತು ಫ್ರಾಸಾ-1 ರವರು ಹೋದಾಗ ಅಲ್ಲಿ ಎಷ್ಟು ಹೊತ್ತು ಇದ್ದೀರಿ ಎಂದರೆ ಸಾಕ್ಷಿಯು ನಾವು ಅಲ್ಲಿ ಹೋದ ಕೂಡಲೇ ಮಮತರವನ್ನು ಕರೆದುಕೊಂಡು ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಆ ಸಮಯದಲ್ಲಿ ನಾನು ಮತ್ತು ಫ್ರಾಸಾ-1 ರವರು ಬೈಕ್ ನಲ್ಲಿ ಹೋದೆವು. ಮಮತ ಮತ್ತು ಅವರ ಮಗಳು ಆಟೋದಲ್ಲಿ ಬಂದರು. ಮಮತರವರಿಗೆ ಇಬ್ಬರು ಮಕ್ಕಳು. ಅವರು ಅವರ ಮನೆಯಲ್ಲಿಯೇ ಇದ್ದರು. ಮಮತರವರ ಮನೆಯಲ್ಲಿ ಅವರ ಮಕ್ಕಳು ಮತ್ತು ನನ್ನನ್ನು ಹೊರತು ಪಡಿಸಿ ಇನ್ನೂ ಇಬ್ಬರು ಸಂಬಂಧಿಕರ ಮಕ್ಕಳು ಇದ್ದರು. ಅವರಿಬ್ಬರ ಹೆಸರನ್ನು ನಿಮಗೆ ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಆ ದಿನ ಆಟೋದಲ್ಲಿ ಮಮತರವರೊಂದಿಗೆ ಬಂದ ಅವರ ಮಗಳ ಹೆಸರು ಸಿಂಚನ ಆಕೆ ಕೆಲಸಕ್ಕೆ ಹೋಗುತ್ತಿದ್ದಳು. ಈ ವಿಚಾರವನ್ನು ನೀವು ಪೊಲೀಸರಿಗೆ ಹೇಳಿದ್ದೀರಾ ಎಂದರೆ

ಸಾಕ್ಷಿಯು ಅಷ್ಟೊಂದು ವಿವರವಾಗಿ ಹೇಳಿಲ್ಲ ಆದರೆ ಹೇಳಿದ್ದೇನೆ ಎನ್ನುತ್ತಾರೆ.

10. ಹೋಲಿ ಕ್ರಾಸ್ ಬಳಿ ಹೋದಾಗ ಸಮಯ ಎಷ್ಟಾಗಿತ್ತು ಎಂದರೆ ಸಾಕ್ಷಿಯು ಬೆಳಗ್ಗೆ 11.45 ರಿಂದ ಮದ್ಯಾಹ್ನ 12.00 ಗಂಟೆ ಸಮಯ ಆಗಿತ್ತು ಇನ್ನುತ್ತಾರೆ. ಅಲ್ಲಿಗೆ ಹೋದ ಕೂಡಲೆ ನಾವು ಫ್ರಾಸಾ-1 ರವರನ್ನು ಎಮರ್ಜೆನ್ಸಿ ವಿಭಾಗಕ್ಕೆ ಕರೆದುಕೊಂಡು ಹೋದೆವು. ಅಲ್ಲಿ ಯಾವ ವೈದ್ಯರು ಮಮತರವನ್ನು ಪರೀಕ್ಷಿಸಿದರು ಎಂದರೆ ಸಾಕ್ಷಿ ನರ್ಸ್ ಗಳು ನೋಡಿ ನಂತರ ಸಹದೇವ್ ವೈದ್ಯರನ್ನು ಕರೆಸಿದರು ಎನ್ನುತ್ತಾರೆ. ಆ ದಿನ ನೀವು ಮತ್ತು ಫ್ರಾಸಾ-1 ರವರು ಫ್ರಾಸಾ-9 ರವರನ್ನು ಹೋಲಿ ಕ್ರಾಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಫ್ರಾಸಾ-9 ರವರಿಗೆ ರಕ್ತ ಪರೀಕ್ಷೆ ಮಾಡಿಸಿ ಅದರ ವರದಿ ಬರುವವರೆಗೂ ನೀವು ಎಲ್ಲಿ ಇದ್ದೀರಿ ಎಂದರೆ ಸಾಕ್ಷಿ ನಾವು ಆಸ್ಪತ್ರೆಯಲ್ಲಿಯೇ ಇದ್ದೆವು ಎನ್ನುತ್ತಾರೆ. ಅವರ ರಕ್ತ ಪರೀಕ್ಷೆಯ ವರದಿ ಬಂದ ಬಳಿಕವೂ ಸಂಜೆ 4.45 ರಿಂದ 5.00 ಗಂಟೆಯ ವರೆಗೆ ನಾವು ಆಸ್ಪೆತ್ರೆಯಲ್ಲಿಯೇ ಇದ್ದೆವು ಎನ್ನುತ್ತಾರೆ. ಆ ಸಮಯದಲ್ಲಿ ನಾನು ಯಾರಿಗೂ ಪೋನನ್ನು ಮಾಡಿರುವುದಿಲ್ಲ. ಆಸ್ಪತ್ರೆಯಿಂದ ಹೊರಟು ನೇರವಾಗಿ ಫ್ರಾಸಾ-1 ರವರ ಮನೆಯ ಹತ್ತಿರ ಹೊದೆವು. ಆ ದಿನ ನಾನು ಮತ್ತು ಫ್ರಾಸಾ-1 ರವರು ಹೋಲಿಕ್ರಾಸ್ ಗೆ ಹೊದ ಬೈಕ್ ನನ್ನ ಸ್ನೇಹಿತನದ್ದು. ಫ್ರಾಸಾ-1 ರವರ ಮನೆಯ ಹತ್ತಿರ ಹೋದಾಗ

ನಾನು ಕೆಳಗಡೆ ಇದ್ದೆನು, ಮೊದಲಿಗೆ ಮೇಲೆ ಹೋದ ಫ್ರಾಸಾ-1 ರವರು ಕಿರುಚಿಕೊಂಡರು. ನಾನು ಕೆಳಗಡೆ ಇದ್ದ ಅಂಗಡಿಯಲ್ಲಿ ಇದ್ದವರನ್ನು ಮಾತನಾಡಿಸುತ್ತಿದ್ದೆನು. ಫ್ರಾಸಾ-1 ರವರು ಕಿರುಚಿಕೊಂಡ ಶಬ್ದ ಕೇಳಿದಾಗ ನಾನು, ಅಂಗಡಿಯವರು ಮತ್ತು ಇನ್ನೂ ಇತರರು ಮೇಲೆ ಹೋದೆವು. ಆ ಸಮಯದಲ್ಲಿ ನೀವು ಬಾಗಿಲನ್ನು ತೆಗೆದು ಒಳಗೆ ಹೋಗಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಫ್ರಾಸಾ-1 ರವರು ಹೇಳಿದ್ದರಿಂದ ನಿಮಗೆ ಗೊತ್ತಾಯಿತು ಹೊರತು ನೀವು ಒಳಗೆ ಹೋಗಿ ನೋಡಿಲ್ಲ ಎಂದರೆ ಸಾಕ್ಷಿಯು ಆ ಸಮಯದಲ್ಲಿ ನಾನು ಒಳಗೆ ಹೋಗಿ ನೋಡಿಲ್ಲ ಆದರೆ ನಂತರದಲ್ಲಿ ಹೋಗಿ ನೋಡಿರುತ್ತೇನೆ ಎನ್ನುತ್ತಾರೆ. ಆ ರೀತಿ ನೀವು ಫ್ರಾಸಾ-1 ರವರ ಮನೆಯ ಹತ್ತಿರ ಹೋಗಿ ನಿಂತಿದ್ದಾಗಿ ನಂತರ ಫ್ರಾಸಾ-1 ರವರ ಕಿರುಚಾಟದ ಶಬ್ದ ಕೇಳಿ ಮೇಲೆ ಹೋಗಿ ನೋಡಿದ್ದಾಗಿ ಹೇಳಿದ್ದೀರಿ ಸದರಿ ಪ್ರಕ್ರಿಯೆಗಳಿಗೆ ಸುಮಾರು 15 ನಿಮಿಷ ಸಮಯ ತಗುಲಿತ್ತೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಪೊಲೀಸರಿಗೆ ವಿಚಾರವನ್ನು ಯಾರು ತಿಳಿಸಿದರು ಎಂದು ನಿಮಗೆ ಗೊತ್ತಿತ್ತೇ ಎಂದರೆ ಸಾಕ್ಷಿ ಮೊದಲಿಗೆ ಗೊತ್ತಿರಲಿಲ್ಲ ನಂತರ ರುಬೇನ್ ಮೊಸಿಸ್ ಎಂದು ಗೊತ್ತಾಯಿತು. ಸುಮಾರು 5-10 ನಿಮಿಷದಲ್ಲಿ ಬಸವನಹಳ್ಳಿ ಪೊಲೀಸರು ಜೀಪಿನಲ್ಲಿ ಅಲ್ಲಿಗೆ ಬಂದಿದ್ದರು. ಪೊಲೀಸರು ಬಂದ ಬಳಿಕ ಅವರು ತಮ್ಮನ್ನು ಬಿಟ್ಟು ಬೇರೆ ಯಾರನ್ನು ಮನೆಯ ಒಳಗೆ ಸೇರಿಸಿಲ್ಲ ಎಂದರೆ ಸಾಕ್ಷಿಯು ಬಾಗಿಲನ್ನು

ತೆರೆಯಲಾಗಿತ್ತು ಹಾಗಾಗಿ ನಾವು, ಬಾಗಿಲಲ್ಲಿಯೇ ನಿಂತುಕೊಂಡಿದ್ದೆವು ಎನ್ನುತ್ತಾರೆ. ಆ ಸಮಯದಲ್ಲಿ ಫ್ರಾಸಾ-1 ರವರು ಮನೆಯ ಹೊರಗೆ ಅಳುತ್ತಾ ಕುಳಿತಿದ್ದರು. ನಾನು ನೋಡಿದಾಗ ಆರೋಪಿ ಮನೆಯ ಒಳಗೆ ನಿಂತಿದ್ದನು. ಆತ ಆ ಸಮಯದಲ್ಲಿ ಮನೆಯ ಯಾವ ಭಾಗದಲ್ಲಿ ನಿಂತಿದ್ದನು ಎಂದರೆ ಸಾಕ್ಷಿಯು ಮನೆಯ ಹಾಲಿನಲ್ಲಿ ಎನ್ನುತ್ತಾರೆ. ಆ ಸಮಯದಲ್ಲಿ ನೀವು ನೋಡಿದಾಗ ಆರೋಪಿ ಮಾನಸಿಕ ವಾಗಿ ನೊಂದ ಸ್ಥಿತಿಯಲ್ಲಿ ಇದ್ದನೇ ಎಂದರೆ ಸಾಕ್ಷಿಯ ಆತ ತಲೆ ತಗ್ಗಿಸಿಕೊಂಡು ನಿಂತಿದ್ದನು. ಆ ಸಮಯದಲ್ಲಿ ಆರೋಪಿ ಯಾವ ರೀತಿಯ ಮತ್ತು ಯಾವ ಬಣ್ಣದ ಬಟ್ಟೆಗಳನ್ನು ದರಿಸಿದ್ದನು ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ. ಆರೋಪಿಯು ಪೊಲೀಸರಿಗೆ ಬಟ್ಟೆಗಳನ್ನು ಕೊಟ್ಟಿದ್ದಾಗಿ ಹೇಳಿದ್ದೀರಿ ಅವು ಯಾವ ರೀತಿಯದ್ದು ಎಂದು ನೀವು ಗಮನಿಸಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ಸದರಿ ಬಟ್ಟೆಗಳು ಬೆಡ್ ರೂಮಿನ ಬಾಗಿಲಿನ ಹತ್ತಿರ ಇದ್ದವು. ಆರೋಪಿ ಬಟ್ಟೆಗಳನ್ನು ಪೊಲೀಸರಿಗೆ ಕೊಟ್ಟಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. 5-10 ನಿಮಿಷದ ಬಳಿಕ ಬಸವನಹಳ್ಳಿ ಪೊಲೀಸರು ಅಲ್ಲಿಗೆ ಬಂದರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಪೊಲೀಸರು ಆರೋಪಿಯನ್ನು ಏನು ಮಾಡಿದೆ ಎಂದು ಕೇಳಿದಾಗ ಆತ ಮನೆಯ ಹಾಲಿನಲ್ಲಿದ್ದ ಎರಡನೇ ಬೆಡ್ ರೂಮಿನಿಂದ ಬಟ್ಟೆಗಳನ್ನು ತಂದು ತೋರಿಸಿದ್ದಾಗಿ ಹೇಳಿರುವುದು ಸುಳ್ಳು

ಎಂದರೆ ಸರಿಯಲ್ಲ. ಪೊಲೀಸರು ಪ್ರಾಸಾ.1 ರವರಿಗೆ ಠಾಣೆಗೆ ಬಂದು ದೂರು ನೀಡಿ ಎಂದು ಹೇಳಿ ಆರೋಪಿ ಕೊಟ್ಟ ಬಟ್ಟೆಗಳನ್ನು ತೆಗೆದುಕೊಂಡು ಆರೋಪಿಯನ್ನು ಠಾಣೆಗೆ ಕರೆದುಕೊಂಡು ಹೋದರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನೀವು ಮನೆಯ ಒಳಗೆ ಹೋಗದ ಕಾರಣ ಸುಧಾರವರ ಮೃತ ದೇಹವನ್ನು ನೋಡಿಲ್ಲ ಎಂದರೆ ಸಾಕ್ಷಿಯು ಬಾಗಿಲಲ್ಲಿಯೇ ನಿಂತುಕೊಂಡು ನೋಡಿದ್ದೇನೆ ಎನ್ನುತ್ತಾರೆ. ನಿಪಿ.3, ನಿಪಿ.4, ನಿಪಿ.5, ನಿಪಿ.6 ಎಂದು ಗುರುತಿಸಲ್ಪಟ್ಟಿರುವ ಫೋಟೋಗಳಲ್ಲಿ ಆ ದಿನ ನಾನು ಪ್ರಾಸಾ.1 ರವರ ಮನೆಗೆ ಹೋದಾಗ ಮನೆಯ ಮುಂಬಾಗಿಲಿನ ಹಿಂಭಾಗ ರಕ್ತದ ಮಡುವಿನಲ್ಲಿ ಬಿದ್ದಿದ್ದ ಸುಧಾರವರ ಮೃತ ದೇಹ ಕಂಡು ಬರುವುದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

11. ನಾನು ಅರವಿಂದನಗರದಲ್ಲಿರುವ ನನ್ನ ಚಿಕ್ಕಮ್ಮನಾದ ಚಾಸಾ.15 ರವರ ಮನೆಯಲ್ಲಿ ವಾಸವಾಗಿದ್ದೆನು, ನಾನು ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಗಿನಿಂದ ಚಾಸಾ.15 ರವರ ಮನೆಯಲ್ಲಿಯೇ ವಾಸವಾಗಿದ್ದೇನೆ ಮತ್ತು ಆ ಸಮಯದಲ್ಲಿ ಚಾಸಾ.15 ರವರ ಇನ್ನೂ ಕೆಲವು ಸಂಬಂಧಿಕರ ಮಕ್ಕಳು ಮತ್ತು ನಾನು ಒಟ್ಟಿಗೆ ಅವರ ಮನೆಯಲ್ಲಿ ವಾಸವಾಗಿದ್ದೆವು ಮತ್ತು ಆ ರೀತಿ ವಾಸಿಸಲು ನಾವು ಚಾಸಾ.15 ರವರಿಗೆ ತಿಂಗಳಿಗೆ ಇಂತಿಷ್ಟಂತೆ ಹಣವನ್ನು ಕೊಡುತ್ತಿದ್ದೆವು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ತಿಂಗಳಿಗೆ ಪ್ರಾಸಾ-9 ರವರಿಗೆ ಎಷ್ಟು ಹಣವನ್ನು ಕೊಡುತ್ತಿದ್ದೀರಿ ಎಂದರೆ ಸಾಕ್ಷಿಯು 4.000/- ಎನ್ನುತ್ತಾರೆ.

12. ದಿನಾಂಕ 23.09.2021 ರಂದು ಬೆಳಿಗ್ಗೆ 11.00 ಗಂಟೆ ಸುಮಾರಿಗೆ ಗೌರಿಕಾಲುವೆಯಲ್ಲಿ ವಾಸವಾಗಿದ್ದ ಫ್ರಾಸಾ.1 ರವರನ್ನು ಮಾತನಾಡಿಸಲು ಅವರ ಮನೆಗೆ ಹೋಗಿದ್ದೆನು, ಆಗ ಅವರ ಮನೆಯಲ್ಲಿ ಫ್ರಾಸಾ.1, ಆರೋಪಿ ಮತ್ತು ಅವರ ತಾಯಿ ಸುಧಾ ಇದ್ದರು, ಅಲ್ಲಿಗೆ ಹೋದ ಸ್ವಲ್ಪ ಸಮಯದ ಬಳಿಕ ಚಾಸಾ.15 ರವರು ನನಗೆ ಫೋನ್ ಮಾಡಿ ನನಗೆ ಹುಷಾರಿಲ್ಲ ಆಸ್ಪತ್ರೆಗೆ ಹೋಗಬೇಕು ಬಾ ಎಂದು ಕರೆದರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆಗ ನಾನು ಫ್ರಾಸಾ.1 ರವರನ್ನು ಕುರಿತು ನನ್ನ ಜೊತೆ ಬರುತ್ತೀಯಾ ಎಂದು ಕೇಳಿದೆನು, ಆಗ ಫ್ರಾಸಾ.1 ರವರು ಅವರ ಮನೆಯಲ್ಲಿ ಹೇಳಿ ನನ್ನೊಂದಿಗೆ ಬಂದನು, ನಂತರ ನಾವಿಬ್ಬರೂ ಚಾಸಾ.15 ರವರ ಮನೆಗೆ ಹೋಗಿ ಚಾಸಾ.15 ರವರನ್ನು ಕರೆದುಕೊಂಡು ಚಿಕ್ಕಮಗಳೂರಿನ ಹೋಲಿಕ್ರಾಸ್ ಆಸ್ಪತ್ರೆಗೆ ಹೋದೆವು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಅಲ್ಲಿ ವೈಧ್ಯರು ಅವರನ್ನು ಪರೀಕ್ಷಿಸಿ ರಕ್ತ ಪರೀಕ್ಷೆ ಮಾಡಿದರು, ರಿಪೋರ್ಟ್ ಬರುವಷ್ಟರಲ್ಲಿ ಮಧ್ಯಾಹ್ನ 1.30 ಯಿಂದ 2.00 ಗಂಟೆಯಾಗಿತ್ತು, ನಂತರ ಅದನ್ನು ವೈಧ್ಯರಿಗೆ ತೋರಿಸಿದಾಗ ಅವರು ಚಾಸಾ.15 ರವರನ್ನು ಚಿಕಿತ್ಸೆಗೆ ದಾಖಲಿಸಬೇಕು ಎಂದು ಹೇಳಿದರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಂತರ ನಾನು ಮತ್ತು ಫ್ರಾಸಾ.1 ರವರು ಚಾಸಾ15 ರವರನ್ನು ಸದರಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲು ಮಾಡಿ ಸಂಜೆ 5.00 ಗಂಟೆಗೆ ಅಲ್ಲಿಂದ ಹೊರಟೆವು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

13. ಆರೋಪಿ ಮಾನಸಿಕವಾಗಿ ಅಸ್ವಸ್ತನಾಗಿದ್ದು ಆ ಬಗ್ಗೆ ಅವರ ತಾಯಿ ಸುಧಾರವರು ಆತನನ್ನು ಆಸ್ಪತ್ರೆಗೆ ಕೆರೆದುಕೊಂಡು ಹೋಗಿ ಚಿಕಿತ್ಸೆ ಕರೆದುಕೊಂಡು ಹೋಗುತ್ತಿದ್ದರು ಮತ್ತು ದೇವಸ್ಥಾನಕ್ಕೆ ಕರೆದುಕೊಂಡು ಹೋಗುತ್ತಿದ್ದ ವಿಚಾರ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಸುಧಾರವರಿಗೆ ಆರೋಪಿಯನ್ನು ಕಂಡರೆ ಮೊದಲಿನಿಂದಲೂ ಪ್ರೀತಿ ಇತ್ತು ಎಂದರೆ ಸರಿ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಘಟನೆ ನಡೆಯದಿದ್ದರೂ ಮತ್ತು ನಿಮಗೆ ಆ ಬಗ್ಗೆ ನಿಮಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಭಾನುಮತಿ ಬಿ.ಸಿ)

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಮಗಳೂರು.